<u>ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಕೊಪ್ಪಳ</u>

ಸಿ.ಸಿ.ನಂಃ 354/2019

ಚಾಸಾಃ( 01 ) ಪ್ರಾಸಾ ( 01 )

ದಿನಾಂಕಃ 13-08-2025 ರಂದು ಸಾಕ್ಷಿಗೆ ಪ್ರಮಾಣ ಭೋದಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | ಮಂಜುನಾಥ |
| ತಂದೆ ಹೆಸರು | ಶಿವಪ್ಪ ಯಲಬುರ್ಗಿ |
| ವಯಸ್ಸು | 29 ವರ್ಷ, |
| ಉದ್ಯೋಗ | ಗಾರೆ ಕೆಲಸ |
| ವಾಸಸ್ಥಳ | ಹಿರೇಬೊಮ್ಮನಹಳ್ಳಿ |

**<u>ಮುಖ್ಯ ವಿಚಾರಣೆಃ ಸಸಅ ರವರಿಂದ:</u>**

ದಿಃ 15-09-2018 ರಂದು ನಾನು, ಚಸಾ 4 ಮತ್ತು 5 ರವರು ರಾತ್ರಿ 11.00 ಗಂಟೆಗೆ ಬೆಂಗಳೂರುನಿಂದ ಕೆ ಎಸ್ ಅರ್ ಟಿಸಿ ಬಸ್ ನಂ. ಕೆಎ 34 ಎಫ್ 0804 ನೇದ್ದರಲ್ಲಿ ಹೊರಟು ಕೊಪ್ಪಳಕ್ಕೆ ಬರುತ್ತಿದ್ದಾಗ ಮಾರನೇ ದಿನ ಬೆಳಗಿನ ಜಾವ ಆರ್ ಟಿ ಓ ಅಫೀಸ್ ಹತ್ತಿರ ನಾವು ಪ್ರಯಾಣಿಸುತ್ತಿದ್ದ ಬಸ್ ನ ಚಾಲಕ ಅತೀವೇಗವಾಗಿ ಮತ್ತು ಅಜಾಗ್ರುಕತೆಯಿಂದ ಚಾಲನೆ ಮಾಡಿಕೊಂಡು ಬಂದು ಸದರಿ ಬಸ್ ಎಡಬಾಗಕ್ಕೆ ಹೋಗಿ ಮರಕ್ಕೆ ಗುದ್ದಿ ಎಡಭಾಗಕ್ಕೆ ಹೊರಳಿರುತ್ತದೆ. ನನಗೆ ಸಣ್ಣಪುಟ್ಟ ಗಾಯಗಳು ಅಗಿದ್ದು, ಚಸಾ 4 ರವರಿಗೆ ಬಲವಾದ ಪೆಟ್ಟು ಬಿದಿದ್ದು, ಚಾಸಾ 5 ರವರಿಗೆ ಬಲಬದಿಯ ಮೊಣಕಾಲಿಗೆ ಪೆಟ್ಟಾಗಿರುತ್ತದೆ. ಸದರಿ ಬಸ್ ನ ಚಾಲಕನ ಮತ್ತು ನಿರ್ವಾಹಕನ ಕಾಲುಗಳು ಮುರಿದಿರುತ್ತವೆ. ಇನ್ನೊಬ್ಬ ಪ್ರಯಾಣಿಕನಿಗೆ ಮೂಗಿಗೆ ಪೆಟ್ಟಾಗಿದ್ದು, ನಂತರ ನಮ್ಮನ್ನು ನಮ್ಮ 07.30 ರಿಂದ 08.30 ರ ಸಮಾರಿಗೆ ಜಿಲ್ಲಾ ಅಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ ನಂತರ ಪೋಲಿಸರು ಅಸ್ಪತ್ರೆಗೆ ಬಂದು ದೂರು ಪಡೆದಿರುತ್ತಾರೆ. ಸಾಕ್ಷಿಯು ಫಿರ್ಯಾದಿಯನ್ನು ನೋಡಿ ಗುರುತಿಸಿದ್ದು ಸದರಿ ಫಿರ್ಯಾದಿಯನ್ನು ನಿಪಿ 1 ಎಂದು ಮತ್ತು ಅತನ ಸಹಿಯನ್ನು ನೀಪಿ 1(ಎ) ಎಂದು ಗುರುತಿಸಲಾಯಿತು. ಸದರಿ ಬಸ್ ನ ಚಾಲಕನ ಹೆಸರು ನನಗೆ ಗೊತ್ತಿರುವುದಿಲ್ಲ ಅವರನ್ನು ಈದಿನ ನ್ಯಾಯಾಲಯದಲ್ಲಿ ನೋಡಿ ಗುರುತಿಸಿರುತ್ತಾರೆ. ಅಪಘಾತ ಪಡಿಸಿದ ಬಸ್ ನ್ನು ನೋಡಿದರೇ ಗುರುತಿಸುತ್ತೇನೆ.

**<u>ಪಾಟೀ ಸವಾಲು ಆರೋಪಿತರ ಪರ ವಕೀಲರಿಂದ</u>**

ಕೋರಿಕೆಯ ಮೇರೆಗೆ ಮುಂದೂಡಲಾಗಿದೆ.

(ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ ಸರಿ ಇದೆ ಎಂದು ಒಪ್ಪಿರುತ್ತಾರೆ

ಹೆ. ಜೆ ಎಂ ಎಫ್ ಸಿ ಕೊಪ್ಪಳ.